1	2	3	4	5
6.	22/2003–04 ದಿನಾಂಕ 17–5–2004	ಪೆರಂಪಳ್ಳಿ ಗ್ರಾಮ ಉಡುಪಿ ತಾ:	ಆರೋಪಿ ಪತ್ತೆಯಾಗಿರುವುದಿಲ್ಲ	15
ಕಾರ್ಕಳ ತಾಲ್ಲೂಕು				
1.	4/2003–04 ದಿನಾಂಕ 8–10–2003	ತಳ್ಳಾರು ಗ್ರಾಮ ಕಾರ್ಕಳ ತಾ:	ಹಿನಾಸ್ ಡಿಸೋಜ ಬಿನ್ ಅಂತೋನಿ ಡಿಸೋಜ, ಚೊಯವಿಲ್, ಉದ್ದಪಲಕೆ, ದುರ್ಗಾ, ತಳ್ಳಾರು ಗ್ರಾಮ ಕಾರ್ಕಳ ತಾ:	5

ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿನ ಬುಡಕಟ್ಟು ಜನಾಂಗದವರಿಗೆ ಹಕ್ಕುಪತ್ರ ನೀಡುವ ಬಗ್ಗೆ

208 (689) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಹರಿಜನ, ಗಿರಿಜನ ಮತ್ತು ಬುಡಕಟ್ಟು ಜನಾಂಗದವರು ಬಹಳ ವರ್ಷಗಳಿಂದ ಕೃಷಿ ಮಾಡುತ್ತಿರುವ ಭೂಮಿಗೆ ಹಕ್ಕುಪತ್ರ ನೀಡಲಾಗುವುದೇ;

ಆ) ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು;

ಇ) ಇಲ್ಲಿ ವಾಸಿಸುವವರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುಚ್ಛಕ್ತಿ ಕುಡಿಯುವ ನೀರು ಹಾಗೂ ಆಸ್ಪತ್ರೆ ಕಲ್ಪಿಸಲು ಸಂಬಂಧಪಟ್ಟವರಿಗೆ ಅನುಮತಿ ನೀಡಲಾಗುವುದೇ;

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಹೌದು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ಎನ್‌ಕ್ಲೋಸರ್‌ಗಳಲ್ಲಿನ ಅಕ್ರಮ ಸಾಗುವಳಿ ನಿಯಮಾನುಸಾರ ಸಕ್ರಮಗೊಳಿಸಿ ಹಕ್ಕುಪತ್ರ ನೀಡಲಾಗುವುದು.

ಆ) ನಮೂನೆ 50, 53ರ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸಿ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಹಾಗೂ ಅನಧಿಕೃತ ಮನೆ ಸಕ್ರಮ ಅರ್ಜಿಗಳ ಬಗ್ಗೆ ನಿಯಮ ಪ್ರಕಾರ ಶೀಘ್ರ ಕ್ರಮ ವಹಿಸಿ ಜಮೀನು ಹಾಗೂ ವಾಸದ ಮನೆ ನಿರ್ಮಾಣಗಳನ್ನು ಸಕ್ರಮಗೊಳಿಸಿ, ಹಕ್ಕುಪತ್ರ ನೀಡಲು ಆಧ್ಯತೆ ಮೇಲೆ ಕ್ರಮ ವಹಿಸಲಾಗುತ್ತದೆ.

ಇ) ಸರ್ಕಾರದ ಅಧಿಸೂಚನೆ ಎಫ್.ಇ.ಇ:270:ಎಫ್‌ಡಬ್ಲ್ಯೂಎಲ್:99, ದಿನಾಂಕ 16–6–2001ರ ಪ್ರಕಾರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಕಲಂ 35(4)ರ ಮೇರೆಗೆ ರಾಷ್ಟ್ರೀಯ ಉದ್ಯಾನವನವೆಂದು ಘೋಷಣೆ ಆಗಿರುತ್ತದೆ. ಆದ್ದರಿಂದ ವನ್ಯ ಜೀವಿಗಳ ಜೀವನಕ್ಕೆ ಬಂಗ ಬಾರದೇ ಇದ್ದಲ್ಲಿ ರೆವಿನ್ಯೂ ಎನ್‌ಕ್ಲೋಸರ್ಸ್ ಕನಿಷ್ಟ ಸೌಲಭ್ಯಗಳಿಗೆ ಅವಕಾಶ ಇದೆ. ಒಂದು ವೇಳೆ ರಾಷ್ಟ್ರೀಯ ಉದ್ಯಾನವನದಿಂದ ಸ್ವಇಚ್ಛೆ ಮೇರೆಗೆ ಹೊರಗೆ ಬಂದು ವಾಸ ಮಾಡಲು ಇಚ್ಛಿಸುವವರಿಗೆ ಪುನರ್ ವಸತಿ ಕಲ್ಪಿಸುವ ಯೋಜನೆ ಸರ್ಕಾರ ಪರಿಶೀಲಿಸುತ್ತಿದೆ.

ಈ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.